

## ನಮ್ಮ ಬಗ್ಗೆ :

‘ಕಲಾಭಿ’ ಒಂದು ಕಲಾ ಪಯಣ

ಕಲೆ, ಕಲಾವಿದ ಮತ್ತು ಕಲಾಪೋಷಣೆ ಈ ಮೂರನ್ನು ಕೇಂದ್ರವಾಗಿಸಿಕೊಂಡು, ‘ಕಲೆಗಾಗಿ ಕಲಾವಿದ; ಕಲಾವಿದನಿಗಾಗಿ ಕಲೆ’ ಎನ್ನುವ ಧ್ಯೆಯವಾಕ್ಯದೊಂದಿಗೆ ಅಸ್ತಿತ್ವಕ್ಕೆ ಬಂದ ಸಂಸ್ಥೆ ‘ಕಲಾಭಿ’.

ಕಲಾಸಕ್ತಿಯುಳ್ಳ, ಸದಾ ಕಲೆಗಾಗಿಯೇ ತುಡಿಯುವ ಯುವಮನಸ್ಸುಗಳ

ಸಂಗಮವಿದು!ಕಲೆಯ ಸೌಂದರ್ಯವನ್ನು ಸರ್ವರೂ ಸವಿಯುವಂತಾಗಬೇಕು; ಕಲೆಯನ್ನು ಎಲ್ಲರೂ ಪ್ರೀತಿಸುವಂತಾಗಬೇಕು; ಕಲೆಯ ಮೂಲಕ ರಸಾನುಭವದ ತುತ್ತತುದಿಗೇರಿ, ಪ್ರತಿಯೊಬ್ಬರಲ್ಲೂ ಸಾಮಾಜಿಕ ಜಾಗೃತಿ ಮೂಡಬೇಕು; ಆದರ್ಶ ಸಮಾಜ ನಿರ್ಮಾಣವಾಗಬೇಕು ಎನ್ನುವುದೇ ಕಲಾಭಿಯ ಗುರಿ, ಸಾವಿರಾರು ಕಲಾಸ್ವಪ್ನಗಳು, ನೂರಾರು ದಾರಿಗಳ ಹುಡುಕಾಟ, ಹಲವಾರು ಗುರಿಗಳು, ಸಾವಿರಾರು ನೋಟಕರ ಮನಸೂರೆಗೊಳ್ಳುವ ಹಪಹಪಿಕೆ, ಕಲೆಗಾಗಿ ಮುಡಿಪಾಗುವ ಜೀವಗಳ ನೈಜ ತುಡಿತ, ಕಲೆಯ ಕಲಿಕೆಗಾಗಿ ನೂತನ ದಾರಿಗಳ ಹುಡುಕಾಟ; ಕಲೆಯ ಮೂಲಕ ಪೂರ್ಣತೆಯ ಅಭೀಷ್ಟೆಯನ್ನು ತೀರಿಸುವುದು; ಹೃದಯ ವಿಕಸನವಾಗಿ, ಮನಸ್ಸಿನ ಕಶ್ಮಲಗಳ ನಿವಾರಣೆಗೈಯುವುದು; ಮನೋಪರಿವರ್ತನೆಯ ದಾರಿಗಳನ್ನು ತೆರೆಯುವುದು... ಹೀಗೇ ನಮ್ಮ ನಿಮ್ಮ ನಡುವಿನ ಕಲೆಯ ಹತ್ತು ಹಲವು ವಿಚಾರಗಳೆಡೆಗೆ ನಮ್ಮ ಪಯಣ.





## ನಾಟಕದ ಬಗ್ಗೆ:

## “ಎ ಫ್ರೆಂಡ್ ಬಿಯಾಂಡ್ ದಿ ಫೆನ್ಸ್"

ಆಗ ತಾನೆ ಪಧೋನ್ನತಿಯಾಗಿ ಕಮಾಂಡೆಂಟ್ ಆದ ನಾಜಿ ಅಧಿಕಾರಿಯ ಮಗ 8 ವರ್ಷದ ಹುಡುಗ ಅಲೆಕ್ಸ್ ,ಅದೆ ವಯಸ್ಸಿನ ಯಹೂದಿ ಹುಡುಗ ಈತನ್ ಹಾಗೂ ಟಿಂಬೋ ಎಂಬ ಪುಟ್ಟ ಮರಿ ಆನೆ ಮೂವರನ್ನೂ ಪೋಲೆಂಡ್ ನ ಕಾನ್ಸಂಟ್ರೇಷನ್ ಕ್ಯಾಂಪ್ ನ ಮುಳ್ಳುಬೇಲಿ ಪ್ರತ್ಯೇಕಿಸಿದರೂ ಅವರು ತಮ್ಮ ಸುತ್ತ

ಮುತ್ತಲಿನ ನೈಜ ಸ್ವರೂಪವನ್ನು ಮರೆತು ಗಾಢವಾದ ಸ್ನೇಹ ಬಂಧಕ್ಕೆ ಒಳ ಪಡುವದರ ಬಗ್ಗೆ ಅದರ ಪರಿಣಾಮವಾಗಿ ಅವರಿಗೆ ಆದ ಘೋರ ಅನ್ಯಾಯದ ಸುತ್ತ ಈ ನಾಟಕ ಹರಿದಾಡುತ್ತದೆ.

ಈ ನಾಟಕವು ಎರಡನೇ ಮಹಾಯುದ್ಧದ ಸುತ್ತ ನಡೆದ ಹಲವು ಕಾಲ್ಪನಿಕ ಹಾಗೂ ನೈಜ ಕಥೆಗಳ ಸ್ಫೂರ್ತ ವಿಸ್ತರಣೆ ಆಗಿದ್ದು ಜರ್ಮನಿಯ ನಾಜಿ ಆಡಳಿತದಿಂದಾದ ಜೀವ್ಹಳ ಹತ್ಯಾಕಾಂಡದ ಚಿತ್ರಣವನ್ನು ಇಬ್ಬರು ಮುಗ್ಧ ಬಾಲಕರ ಮನಸ್ಸುಗಳ ದೃಷ್ಟಿಕೋನದಲ್ಲಿ ಚಿತ್ರಿಸಲು ನಾಟಕ ಪ್ರಯತ್ನಿಸುತ್ತದೆ.

## ನಿರ್ದೇಶನ ಹಾಗೂ ಪರಿಕಲ್ಪನೆ :

### ಶ್ರವಣ್ ಹೆಗ್ಗೋಡು



2008 ರಲ್ಲಿ ನೀನಾಸಮ್ ರಂಗಶಿಕ್ಷಣ ಪಡೆದು 2012 ರಲ್ಲಿ ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರಿನಲ್ಲಿ ರಂಗವಿನ್ಯಾಸದ ಮೇಲೆ ಅಧ್ಯಯನ ಮಾಡಿ ದೆಹಲಿಯಲ್ಲಿ 5 ವರ್ಷ ಪಪ್ಪೆಟ್ ರಂಗಭೂಮಿಯಲ್ಲಿ ಕೆಲಸ ಮಾಡಿದ್ದಾರೆ. ಭಾರತೀಯ ರಂಗಭೂಮಿಯಲ್ಲಿ ತನ್ನದೇ ಆದ ವಿನೂತನ ರಂಗಶೈಲಿಯ ಮೂಲಕ ಗುರುತಿಸಿಕೊಂಡ ಸೃಜನಶೀಲ ನಿರ್ದೇಶಕ ಶ್ರವಣ ಹೆಗ್ಗೋಡು ರವರು, ಭಾರತದಲ್ಲಿ ಅನೇಕ ಕಡೆ ನಿರ್ದೇಶಿಸಿದ ಪಪೆಟ್ ನಾಟಕಗಳನ್ನು ಟರ್ಕಿ, ಚೀನಾ ಜರ್ಮನಿ ಆಸ್ಟ್ರಿಯಾ ದೇಶಗಳ ಪ್ರತಿಷ್ಠಿತ ಪಪೆಟ್ ರಂಗ ಉತ್ಸವಗಳಲ್ಲ ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದ್ದಾರೆ, ಜಪಾನಿನ ಬುನ್ರಾಕು ಮಾದರಿಯ ನಿರ್ಜೀವ ಗೊಂಬೆಗಳಿಗೆ ರಂಗದ ಮೇಲೆ ವಾಸ್ತವಕ್ಕೆ ಹತ್ತಿರ ಎಂಬುವಷ್ಟು ಅವುಗಳಿಗೆ ಜೀವ-ಭಾವ ತುಂಬುವುದನ್ನು ಕರಗತ ಮಾಡಿಕೊಂಡಿರುವ ಇವರು,ಈ ನವೀನ ಮಾದರಿಯ ಕಲಾ ಪ್ರಕಾರವನ್ನು ದಕ್ಷಿಣ ಭಾರತದ ರಂಗಭೂಮಿಗೆ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಇವರು ನಿರ್ದೇಶಿಸಿದ “ರೆಕ್ಸ್ ಅವರ್ಸ್" ಎಂಬ ಡೈನೋಸಾರ್‌ಗಳ ಜಗತ್ತಿನ ಬಗ್ಗೆ ಹೇಳುವ ನಾಟಕ ರಾಜ್ಯಾದ್ಯಂತ ಪ್ರದರ್ಶನಗೊಂಡು ಪ್ರಖ್ಯಾತಿ ಪಡೆದುಕೊಂಡಿದೆ. ಹಾಗೆಯೇ ಪ್ರತಿಷ್ಠಿತ ರಂಗ ಸಂಸ್ಥೆ ನೀನಾಸಮ್ ವಿಧ್ಯಾರ್ಥಿಗಳಿಗೆ ನಿರ್ದೇಶಿಸಿದ ಬೈರ ನಾಟಕವು ಪುದುಚೇರಿಯಲ್ಲಿ ಸಂಗೀತ ನಾಟಕ ಅಕಾಡೆಮಿ ರಂಗ ಉತ್ಸವಕ್ಕೆ ಆಯ್ಕೆ ಯಾಗಿ ಪ್ರದರ್ಶನಗೊಂಡು ಜನ ಮೆಚ್ಚುಗೆಗಳಿಸಿ ಕೊಂಡಿರುತ್ತದೆ.ಹಾಗೆಯೆ ದಿ ರೆಡ್ ಬಲ್ಲೂನ್, ಪ್ಲಾಸ್ಟಿಸಿಟಿ,ಹಕ್ಕಿ ಕತೆ, ಪುರ್ಸನ ಪುಗ್ಗೆ "ದಿ ಫಿಶರ್ ಮ್ಯಾನ್ಸ್ ಡಾಗ್ " "ದಿ ಗಿವಿಂಗ್ ಟ್ರೀ" ಎಂಬ ಪಪ್ಪೆಟ್ ನಾಟಕಗಳು ಇವರ ನಿರ್ದೇಶನದಲ್ಲಿ ಅಮೋಘ ಪ್ರದರ್ಶನ ಕಂಡಿವೆ. ಪ್ರಸ್ತುತವಾಗಿ ಪ್ರಾಣಿಗಳ ದೇಹರಚನೆಗಳ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡುತ್ತಿರುವ ಇವರು ಪ್ರಾಣಿಗಳನ್ನು ರಂಗದಲ್ಲಿ ಗೊಂಬೆಗಳ ಮೂಲಕ ನೈಜವಾಗಿ ತರುವ ಸಾಧ್ಯತೆಗಳ ಹುಡುಕಾಟ ನಡೆಸುತ್ತಿದ್ದಾರೆ.

## ಕಲಾವಿದರು


ರಮೇಶ್ ಕೆ ಬೆಣಕಲ್
ರಂಗಭೂಮಿ ಕಲಾವಿದ


ಭುವನ್ ಮಣಿಪಾಲ್
ನಿರ್ದೇಶಕ ಮತ್ತು ರಂಗಭೂಮಿ ನಟ


ಉಜ್ವಲ್ ಯು.ವಿ
ರಂಗಭೂಮಿ ಮತ್ತು ಚಲನಚಿತ್ರ ನಟ


ಅಶೋಕ್ ಕುಮಾರ್ ಮೈಸೂರು
ರಂಗಭೂಮಿ ಕಲಾವಿದ


ಶ್ರೀಶ ತೆಕ್ಕಟ್ಟೆ
ರಂಗಭೂಮಿ ಕಲಾವಿದ


ರಂಜಿತ್ ಶೆಟ್ಟಿ ಕುಕ್ಕುಡೆ
ರಂಗಭೂಮಿ ಕಲಾವಿದ


ಭಾವನಾ ವಿಷ್ಣುಮೂರ್ತಿ ಕೆರೆಮಠ
ರಂಗಭೂಮಿ ಕಲಾವಿದೆ


ಚರಿತಾ ಶಾರದಾ ಸುಳ್ಯ
ರಂಗಭೂಮಿ ಕಲಾವಿದೆ


ಹರ್ಷಿತಾ ಶಿರೂರು
ರಂಗಭೂಮಿ ಕಲಾವಿದೆ


ಉದಿತ್ ಯು.ವಿ
ಕಲಾವಿದ


ಭಾರ್ಗವಿ ನಾಯಕ್
ರಂಗಭೂಮಿ ಕಲಾವಿದೆ


ನಿವೇದಿತಾ ಅಮೀನ್
ರಂಗಭೂಮಿ ಕಲಾವಿದೆ


ಧನುಷ್ ಕಾಮತ್
ರಂಗಭೂಮಿ ಕಲಾವಿದ


ಆರ್ಯನ್ ಯಾದವ್
ಕಲಾವಿದ


ಸ್ಕಂದ
ಕಲಾವಿದ

## ರಂಗದ ಹಿಂದೆ

ರಂಗ ವಿನ್ಯಾಸ ಮತ್ತೆ ಬೆಳಕಿನ ವಿನ್ಯಾಸ – ರಾಜು ಮಣಿಪಾಲ್

ಪರಿಕರಗಳು – ಗೋಪಿನಾಥ್ ಆಚಾರ್ಯ

ವಸ್ತ್ರ ವಿನ್ಯಾಸ – ಉಜ್ವಲ್ ಯು.ವಿ , ರಾಜು ಗಡಿಕಟ್ಟೆ

ಪಪ್ಪೆಟ್ ವಿನ್ಯಾಸ ಮತ್ತು ತಯಾರಿ – ಶ್ರವಣ್ ಹೆಗ್ಗೋಡು, ರಂಜಿತ್ ಶೆಟ್ಟಿ ಕುಕ್ಕುಡೆ, ಅಶೋಕ್ ಕುಮಾರ್ ಮೈಸೂರು

ಬೆಳಕಿನ ನಿರ್ವಹಣೆ : ಮಂಜುನಾಥ್ ಹಿರೇಮಠ

## SPECIAL THANKS

ನಿರ್ದಿಗಂತ
NIRDIGANTHA

ಅರೆಹೊಳೆ ಪ್ರತಿಷ್ಠಾನ
• ಶಿಕ್ಷಣ • ಕಲೆ • ಸಾಹಿತ್ಯ • ಸಂಸ್ಕೃತಿ

ನಂದಗೋಕುಲ
ಕಲೆಯೊಂದೇ ಕುಲ


ಕಲಾಭಿ (ರಿ.)

'ಉಜ್ವಲ್, ಉದಿತ್', ರಕ್ತೇಶ್ವರಿ ದೇವಸ್ಥಾನದ ಬಳಿ,
ಮಾಲೆಮಾರ್, ಮಂಗಳೂರು-575006
ದೂರವಾಣಿ: +91 84316 31998 | +91 99007 72221
E-mail: kalabhi.org@gmail.com
Website: www.kalabhi.org


ಸಹಾಯ ಧನವನ್ನು ಸ್ವೀಕರಿಸಲಾಗುವುದು

**Bank Details**
**Name : KALABHI**
**A/C no: 40236938337**
**IFSC : SBIN0020803**

UPI ID: QR.16593244@sbi

ಸಹಾಯಕ್ಕಾಗಿ ಧನ್ಯವಾದಗಳು

ಕಲಾಭಿ (ರಿ)

ಕಲಾಭಿ ಥೀಯೇಟರ್
ಅರ್ಪಿಸುವ

# ಎ ಫ್ರೆಂಡ್ ಬಿಯೊಂಡ್ ದಿ ಫೆನ್ಸ್

ಸಮರೋತ್ತರದ ಕಥನ...

**ಪರಿಕಲ್ಪನೆ ಮತ್ತು ನಿರ್ದೇಶನ: ಶ್ರವಣ್ ಹೆಗ್ಗೋಡು**

